ಶ್ರೀ ಕೆ. ನಾಗಪ್ಪ ಅಳ್ಳ.—ಆ ವೈದ್ಯರುಗಳ ಪೈಕಿ 7 ಜನಗಳಿಗೆ ಈ ವರ್ಷ ನವಂಬರ್ ತಿಂಗಳಿಗೆ 3 ವರ್ಷ ಕಂಪ್ಲೀಟ್ ಆಗುತ್ತದೆ. ಬಾಕಿಯವರು ಬೇರೆ ಬೇರೆ ಕಾರಣಗಳಿಂದ ಒಂದೇ ಕಡೆ ಕೆಲಸಮಾಡುತ್ತಿದ್ದಾರೆ. ಕೆಲವು ವೈದ್ಯರುಗಳು ಕೆಲವು ಸಬ್‌ಜಕ್ಟ್‌ಗಳಲ್ಲಿ ಸ್ಪೆಷಲೈಜ್ ಆಗಿರುವುದರಿಂದ ಅವರು ಒಂದೇ ಕಡೆ ಕೆಲಸಮಾಡುತ್ತಿದ್ದಾರೆ. ಬಾಕಿಯವರನ್ನು ಜನರಲ್ ಟ್ರಾನ್ಸ್‌ಫರ್ ಮಾಡುವಾಗ ಅವರನ್ನು ಟ್ರಾನ್ಸ್‌ಫರ್ ಮಾಡಬೇಕಾಗುತ್ತದೆ.

ಶ್ರೀ ಜಿ. ಎ. ಗೌಡ.—ಬೆಂಗಳೂರು ನಗರದಲ್ಲಿರತಕ್ಕ ಅನ್ಪತ್ರೆಗಳಲ್ಲಿ ಮೂರು ವರ್ಷಗಳಿಗೂ ಮೇಲ್ಪಟ್ಟು ಕೆಲಸಮಾಡುತ್ತಿರುವ ವೈದ್ಯರುಗಳ ಸಂಖ್ಯೆ ಎಷ್ಟು ?

ಶ್ರೀ ಕೆ. ನಾಗಪ್ಪ ಅಳ್ಳ.—ಅದನ್ನು ಉತ್ತರದಲ್ಲಿ ಕೊಟ್ಟಿದೆ.

Sri SANJEEVANATH AIKALA.—May I know know how many doctors are there in the Mental Hospital for more than three years ?

ಶ್ರೀ ಕೆ. ನಾಗಪ್ಪ ಅಳ್ಳ.—ಅದರಲ್ಲಿ ಇಬ್ಬರು ಇದ್ದಾರೆ

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೆಂಟರ್ ಅನ್ಪತ್ರೆಯಲ್ಲಿ 11 ಜನ ಡಾಕ್ಟರುಗಳಿದ್ದಾರೆ ಎಂದು ಹೇಳಿದ್ದೀರಿ, ಆ 11 ಜನ ಡಾಕ್ಟರುಗಳಲ್ಲಿ ಬಹಳ ವರ್ಷಗಳಿಂದಲೂ ಒಂದೇ ಕಡೆ ಕೆಲಸಮಾಡಿಕೊಂಡಿರುವವರು ಯಾರಾದರೂ ಇದ್ದಾರೆಯೇ ?

ಶ್ರೀ ಕೆ. ನಾಗಪ್ಪ ಅಳ್ಳ.—ಮಾನ್ಯ ಸದಸ್ಯರು ಅರೋಪಣೆ ಮಾಡದೆ ಈ ಪ್ರಶ್ನೆಯನ್ನು ಹಾಕಿದ್ದಾರೆ. ಸಾಮಾನ್ಯವಾಗಿ ಮೆಂಟರ್ ಅನ್ಪತ್ರೆಗ ಸ್ಪೆಪಲೈಜ್ ಆಗಿರತಕ್ಕ ಡಾಕ್ಟರುಗಳನ್ನು ಮಾತ್ರ ಹಾಕುತ್ತೇವೆ. ಮತ್ತು ಹೆಚ್ಚು ವರ್ಷ ಕೆಲಸಮಾಡಿ ಹೆಚ್ಚಿನ ಅನುಭವವನ್ನು ಪಡೆದಿರತಕ್ಕಂಥವರನು ಮಾತ್ರ ಅಲ್ಲಿಗೆ ಹಾಕುತ್ತೇವೆ. ಆದ್ದರಿಂದ ಅವರಿಗೆ ಇದು ಅನ್ವಯಿಸುವುದಿಲ್ಲ.

Basic Training Institutions sanctioned and started under the III Five-Year Plan in the State.

*Q.—4. Smt. B L SUBBAMMA (Chickmagalur).—

Will the Government be pleased to state :—

(*a*) the number of Basic Training Institutions sanctioned and started under the III Five Year Plan in the State ;

(*b*) the places and the Districts for which the above institutions were sanctioned ;

(*c*) whether the buildings in respect of the said institutions have been completed and if so, the names of such institutions for which the buildings have been completed ;

(*d*) the names of institutions in respect of which the buildings have not been completed so far ?

*A.— Sri S. R. KANTHI (Minister for Eduction).—

(*a*) Four.

(*b*) (1) Sindhanur, Raichur District.
(2) Kamalapur, Gulbarga District.
(3) Chikkanahalli, Tumkur District.
(4) Chickmagalur, Chickmagalur District.

(c) Yes, in respect of institutions at Sindhanur and Chikkananalli.

(d) Building of the Basic Training Institute at Kamalapur is nearing completion, while the construction of the building of the Institute at Chickmagalur has not yet been taken up.

ಶ್ರೀಮತಿ ಬಿ. ಎಸ್. ಸುಬ್ಬಮ್ಮ.—ಸ್ವಾಮಿ ನನ್ನ ಪ್ರಶ್ನೆಗೆ ಉತ್ತರವಾಗಿ ಸಿಂಧನೂರು ಮತ್ತು ಚಿಕ್ಕನಹಳ್ಳಿಯಲ್ಲಿರುವ ಮೂಲ ಶಿಕ್ಷಣ ಸಂಸ್ಥೆ ತರಪೇತಿ ಸಂಸ್ಥೆಗಳ ಕಟ್ಟಡಗಳ ಕೆಲಸವನ್ನು ಪೂರ್ಣಗೊಳಿಸಲಾಗಿದೆ ಎಂದು ಹೇಳಿದ್ದೀರಿ, ಆದರೆ ಚಿಕ್ಕಮಗಳೂರಿನಲ್ಲಿರುವ ಸಂಸ್ಥೆಯ ಕಟ್ಟಡದ ಕೆಲಸವನ್ನು ಇನ್ನೂ ಕೈಗೊಂಡಿಲ್ಲ ಎಂದು ಹೇಳಿದ್ದೀರಿ ಇದಕ್ಕೆ ಕಾರಣವೇನು ?

†ಶ್ರೀ ಎಸ್. ಆರ್. ಕಂಠಿ.—ಚಿಕ್ಕಮಗಳೂರಿನಲ್ಲಿ ಆ ಕಟ್ಟಡವನ್ನು ಕಟ್ಟುವುದಕ್ಕೆ ಇನ್ನೂ ಸರಿಯಾದ ಜಾಗ ಸಿಕ್ಕಿಲ್ಲ.

Sri G. V. GOWDA.—May I know whether the Government of India has asked this Government to send proposals to start some more teacher training institutions; if so, have this Government sent any proposal ?

Sri S. R. KANTHI.—That is outside the scope of this question.

Sri G. V. GOWDA.—It is said that four institutes are to be started in the Fourth Plan ?

Sri S. R KANTHI.—This question refers to basic training colleges in the Third Plan.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸ್ವಾಮಿ ನಮ್ಮ ರಾಜ್ಯದಲ್ಲಿ ಮೂರನೆಯ ಪಂಚವಾರ್ಷಿಕ ಯೋಜನೆಯ ಮೇರೆಗೆ ನಾಲ್ಕು ಮೂಲ ಶಿಕ್ಷಣ ತರಪೇತಿ ಸಂಸ್ಥೆಗಳನ್ನು ಮಂಜೂರು ಮಾಡಿ ಅವುಗಳನ್ನು ಪ್ರಾರಂಭಿಸಲಾಗಿದೆ ಎಂದು ಹೇಳಿದ್ದೀರಿ, ಹಾಗಾದರೆ ನಮ್ಮ ಗೌರಿಬಿದನೂರಿಗೆ ಅಂಥಾ ಒಂದು ಮೂಲ ಶಿಕ್ಷಣ ತರಪೇತಿ ಸಂಸ್ಥೆಯನ್ನು ಮಂಜೂರು ಮಾಡುವ ವಿಷಯ ಏನಾಗಿದೆ ಸ್ವಾಮಿ ?

ಶ್ರೀ ಎಸ್. ಆರ್. ಕಂಠಿ.—ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಗೌರಿಬಿದನೂರಿಗೆ ಅದು ಸಿಕ್ಕಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಮೂಲ ಶಿಕ್ಷಣ ತರಪೇತಿ ಸಂಸ್ಥೆಗಳ ಕಟ್ಟಡವನ್ನು ಕಟ್ಟುವುದಕ್ಕೆ ಇಂಡಿಯಾ ಸರ್ಕಾರದವರು ಹಣವನ್ನು ಕೊಡುತ್ತಿರುವುದು ನಿಜವೇ ?,

ಶ್ರೀ ಎಸ್. ಆರ್. ಕಂಠಿ.—ಹೌದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಾದರೆ ಈಗ ಮಂಜೂರಾಗಿ, ಪ್ರಾರಂಭವಾಗಿರುವ ಮೂಲ ಶಿಕ್ಷಣ ಸಂಸ್ಥೆಗಳ ಕಟ್ಟಡಗಳನ್ನು ಏತಕ್ಕೆ ಕಟ್ಟಿಲ್ಲ ?

ಶ್ರೀ ಎಸ್. ಆರ್. ಕಂಠಿ.—ಆ ಕಟ್ಟಡವನ್ನು ಕಟ್ಟುವುದಕ್ಕೆ ಬೇಕಾದಂತಹ ನಿವೇಶನ ಬೇಕು.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಈಗ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಂಜೂರಾಗಿರತಕ್ಕ ಮೂಲ ಶಿಕ್ಷಣ ತರಪೇತಿ ಸಂಸ್ಥೆಗಳ ಕಟ್ಟಡವನ್ನು ಕಟ್ಟುವುದಕ್ಕೆ ಕೇಂದ್ರ ಸರ್ಕಾರದವರು ಹಣವನ್ನು ಕೊಡುತ್ತಾರೆ ಎಂದು ತಾವು ಹೇಳಿದಿರಿ, ಹಾಗಾದರೆ ಅವುಗಳ ಕಟ್ಟಡವನ್ನು ಕಟ್ಟುವುದಕ್ಕೆ ಏನಾದರೂ ವ್ಯವಸ್ಥೆಯನ್ನು ಮಾಡಿದ್ದೀರಾ ? ಒಂದು ವೇಳೆ ಅದಕ್ಕೆ ವ್ಯವಸ್ಥೆಯನ್ನು ಮಾಡದೇ ಇದ್ದರೆ ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಅವುಗಳಿಗೆ ವ್ಯವಸ್ಥೆಯನ್ನು ಮಾಡಲಾಗಿದೆ.

1-30 P. M.

Sri G. V. GOWDA.—May I know the number of Basic Training Institutes that are earmarked in Plan III ?

ಶ್ರೀ ಎಸ್. ಆರ್. ಕಂಠಿ.—ಥರ್ಡ್ ಪ್ಲಾನಿಗೆ ಕೊಟ್ಟಿರುವುದನ್ನು ಮುಗಿಸಿಬಿಟ್ಟಿದ್ದೇವೆ.